ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ. ನಾಣಯ್ಯ (ಅಬಕಾರಿ ಸಚಿವರು):

ಅ) 1. ಸಿ.ಎಲ್.2 (ಚಿಲ್ಲರೆ ಮದ್ಯದಂಗಡಿಗಳು) - 22

2. ಸಿ.ಎಲ್. 9 (ಬಾರ್ ಮತ್ತು ರೆಸ್ಟೋರೆಂಟ್) - 08

3. ಸಾರಾಯಿ ಅಂಗಡಿಗಳು - 85

ಆ) ಅಥಣಿ ತಾಲ್ಲೂಕಿನಲ್ಲಿ ಪರವಾನಗಿ ಪಡೆಯದೆ ನಡೆಸುತ್ತಿದ್ದ ಎರಡು ಸಾರಾಯಿ ಅಂಗಡಿಗಳ ಮೇಲೆ ಹಾಗೂ ಒಂದು ಡಾಬಾದ ಮೇಲೆ ಪ್ರಕರಣ ದಾಖಲು ಮಾಡಿಕೊಂಡಿದ್ದು ಅವುಗಳ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗಿದೆ.

ಶಿರಹಟ್ಟಿ ಮತಕ್ಷೇತ್ರದಲ್ಲಿ ಬರುವ ಶಿದ್ದಾಪುರ ಕೆರೆ

2056 (2507) - ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ಮತಕ್ಷೇತ್ರದಲ್ಲಿ ಇರುವ ಶಿದ್ದಾಪುರ ಕೆರೆ (ಹಾವೇರಿ ಜಿಲ್ಲೆಯ ಸವಣೂರ ಹದ್ದಿನಲ್ಲಿ ಇರುವ) ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಶಿದ್ದಾಪುರ ಕೆರೆಯ ವಿಸ್ತೀರ್ಣ ಹಾಗೂ ಅದರಿಂದ ಎಷ್ಟು ಭೂಮಿ ನೀರಾವರಿ ಆಗಬಹುದು;

ಇ) ಸದರಿ ಕೆರೆ ದುರಸ್ತಿ ಹಾಗೂ ಹೂಳು ಎತ್ತಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಹೌದು.

ಆ) ಈ ಕೆರೆಯ ವಿಸ್ತೀರ್ಣ 7.90 ಹೆಕ್ಟೇರ್ ಇದ್ದು, ಸದರಿ ಕೆರೆಯ ಉದ್ದೇಶಿತ ಅಚ್ಚುಕಟ್ಟು 90-30 ಹೆಕ್ಟೇರ್ ಇರುತ್ತದೆ.

ಇ) ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಮರಳು ತುಂಬುವ ಗಾಡಿಗಳ ಸಂಚಾರದಿಂದ ರಸ್ತೆಗಳು ಹಾಳಾಗುತ್ತಿರುವ ವಿಚಾರ

2057 (2508) - ಶ್ರೀಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮರಳು ತುಂಬುವ ಗಾಡಿಗಳ ಸಂಚಾರದಿಂದ ರಸ್ತೆಗಳು ಹಾಳಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಚಾರದಲ್ಲಿ ಸರಕಾರ ಅನುಸರಿಸುತ್ತಿರುವ ಮಾನದಂಡ ಏನು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಹೌದು.